**ದಿನಾಂಕಃ 05.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು ಃ ಪ್ರತಿ ವಾದಿಗಳ ಪರ ವಕೀಲರಿಂದಃ**

2.ನಮ್ಮ ಕುಟುಂಬದಲ್ಲಿ ನಾನೇ ಹಿರಿಯವನು ಎಂದರೆ ಸರಿ. ಹೃದಯರಾಜ್ ಇವರು ನನ್ನ ತಮ್ಮ ಅಂದರೆ 2ನೇ ತಮ್ಮ ಎಂದರೆ ಸರಿ. ಯಡವರ್ಟ್ 3ನೇ ತಮ್ಮ ಎಂದರೆ ಸರಿ. ಕಾರ್ಮಲ್ ಮೇರಿ ನನ್ನ ತಂಗಿ ಎಂದರೆ ಸರಿ. ಜಾನ್ ಬಾಸ್ಕೋ ನನ್ನ 5ನೇ ತಮ್ಮ ಎಂದರೆ ಸರಿ. ಬಲತಾರಾಜ್ ಇವರು ನನ್ನ 6ನೇ ತಮ್ಮ ಎಂದರೆ ಸರಿ. 7ನೇಯವರು ಆಲೆಕ್ಸಜಾಂಡರ್ ಎಂದರೆ ಸರಿ. ಮೇರಿ ಶಮಿತಾ 8ನೇಯವರಾಗಿದ್ದು ನನ್ನ ತಂಗಿ ಎಂದರೆ ಸರಿ. ನಾನು ಸುಳ್ಳು ವಂಶವೃಕ್ಷವನ್ನು ಹಾಜರು ಪಡಿಸಿರುತ್ತೇನೆಂದರೆ ಸರಿಯಲ್ಲ.

3. ನಾನು ಸದರಿ ದಾವೆಯನ್ನು 8 ಸ್ವತ್ತುಗಳ ಮೇಲೆ ಹಾಕಿರುತ್ತೇನೆ. ಸರ್ವೆ ನಂ.195 ರಲ್ಲಿ 3 ಎಕರೆ ಇದೆ. ಸದರಿ ಸರ್ವೆ ನಂ.195 ರಲ್ಲಿ 3 ಎಕರೆ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.195 ರಲ್ಲಿ ನನಗೆ ಬಂದ ಭಾಗದಲ್ಲಿ ನಾನು ನನ್ನ ತಮ್ಮನಾದ ಜಾನ್ ಬಾಸ್ಕೋ ಇವರಿಗೆ ದಿನಾಂಕ 16.01.2009 ರಲ್ಲಿ ಕ್ರಯದ ಕರಾರು ಪತ್ರವನ್ನು ಮಾಡಿಕೊಟ್ಟಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಯು ನನಗೆ ಭಾಗವೇ ಬಂದಿಲ್ಲ ಎಂದು ನುಡಿಯುತ್ತಾರೆ. ಸದರಿ ಸರ್ವೆ ನಂ.195 ರಲ್ಲಿ 35 ಗುಂಟೆ ಜಾಗವನ್ನು ಕ್ರಯದ ಕರಾರು ಪತ್ರ ಮಾಡಿಕೊಟ್ಟಿರುತ್ತೇನೆಂದರೆ ಸರಿಯಲ್ಲ. ಸದರಿ ಪತ್ರಕ್ಕೆ ನನ್ನ ಹಾಗೂ ಸಾಕ್ಷಿದಾರರ ಸಹಿಗಳು ಸಹ ಇದೆ ಎಂದರೆ ಸರಿಯಲ್ಲ. ಸದರಿ 35 ಗುಂಟೆವುಳ್ಳ ಚಕ್ಕುಬಂದಿಯಲ್ಲಿ ಜಾನ್ ಬಾಸ್ಕೋರವರು ರೇಷ್ಮೆ ಹುಳುಗಳನ್ನು ಸಾಗಾಣಿಕೆ ಮಾಡುತ್ತಿದ್ದಾರೆಂದರೆ ಸಾಕ್ಷಿಯು ಎಲ್ಲರೂ ಮಾಡುತ್ತಿದ್ದಾರೆಂದು ನುಡಿಯುತ್ತಾರೆ. ಸದರಿ ಸರ್ವೆ ನಂಬರ್ ನಲ್ಲಿ ನಾನು ಯಾವುದೇ ರೇಷ್ಮೆ ತೋಟ ಮಾಡಿಲ್ಲ ಹಾಗೂ ಸ್ವಾಧೀನದಲ್ಲಿಲ್ಲ ಎಂದರೆ ಸಾಕ್ಷಿಯು ನನಗೆ ಸ್ವಾಧೀನ ಕೊಟ್ಟಿಲ್ಲ ಆದ್ದರಿಂದ ಮಾಡಿಲ್ಲ ಎಂದು ನುಡಿಯುತ್ತಾರೆ.

4. ಸರ್ವೆ ನಂ.374/2 ರಲ್ಲಿ 17 ಗುಂಟೆ ಜಾಗದಲ್ಲಿ ನನಗೆ ಬಂದ ಭಾಗವನ್ನು ನಾನು ಜಾನ್ ಬಾಸ್ಕೋರವರಿಗೆ ದಿನಾಂಕ 25.01.2011 ರಲ್ಲಿ ಬೋಗ್ಯ

ವಾಡಿರುತ್ತೇನೆಂದರೆ ಸರಿಯಲ್ಲ. ನಾನು ಸದರಿ ಜಮೀನಿನಲ್ಲಿ ಸ್ವಾಧೀನದಲ್ಲಿ ಇದ್ದೇನಾ ಎಂದರೆ ಸಾಕ್ಷಿಯು ನನಗೆ ಯಾವುದೇ ಜಮೀನಿನಲ್ಲಿ ಸ್ವಾಧೀನ ಕೊಡುತ್ತಿಲ್ಲ ಎಂದು ನುಡಿಯುತ್ತಾರೆ.

5. ನಿಪಿ-4 ರ ಪ್ರಕಾರ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಆದರೆ ಸದರಿ ಸ್ವತ್ತನ್ನು ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷ್ಮಿಯು ಸೇರಿಸಿರುತ್ತೇನೆಂದು ನುಡಿಯುತ್ತಾರೆ. ಸದರಿ ನಿಪಿ-4 ರ ಸರ್ವೆ ನಂಬರ್ ನ 13 ಗುಂಟೆ ಜಮೀನಿನಲ್ಲಿ ನಾನು ರೇಷ್ಮೆ ತೋಟ ಮಾಡಿಕೊಂಡಿದ್ದೇನೆಂದರೆ ಸರಿಯಲ್ಲ. ಸದರಿ ಸ್ವತ್ತನ್ನು ನಾನು ದಾವೆಯಲ್ಲಿ ಸೇರಿಸುವುದಕ್ಕೆ ನನಗೆ ಯಾವುದೇ ತಕರಾರು ಇಲ್ಲ. ಸರ್ವೆ ನಂ.204/1 ರಲ್ಲಿ 18 ಗುಂಟೆ ಇದ್ದು ಅದರಲ್ಲೂ ಸಹ ನಾನು ರೇಷ್ಮೆ ತೋಟ ಮಾಡಿರುತ್ತೇನೆಂದರೆ ಸರಿಯಲ್ಲ. ಸರ್ವೆ ನಂ.373/3 ಇದರಲ್ಲಿ 13 ಗುಂಟೆ ಇರುತ್ತದೆ ಈ ಸಂಬಂಧ ಪಹಣಿ ನೋಡಿರುತ್ತೇನೆ. ಸರ್ವೆ ನಂ.373/2 ರ ಖಾತೆ ನನ್ನ ತಾಯಿಯ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನಲ್ಲಿ ನಮ್ಮ ವಾಸನ ಮನೆ, ಜಾನುವಾರುಗಳನ್ನು ಸಾಕುವ ಸ್ದಳ ಹಾಗೂ ರೇಷ್ಮೆ ತೋಟ ಮಾಡಿರುತ್ತೇನೆಂದರೆ ಸರಿಯಲ್ಲ. ಸದರಿ ಸ್ವತ್ತನ್ನು ನಾನು ದಾವೆ ಸ್ವತ್ತಿನಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿಯು ಸೇರಿಸಿರುತ್ತೇನೆಂದು ನುಡಿಯುತ್ತಾರೆ.

6. ದಾವಾ ಸ್ವತ್ತಿನ ಐಟಂ ನಂ.7 ರಲ್ಲಿ ತೋರಿಸಿರುವಂತೆ ಖಾನೇಷುಮಾರಿ ನಂ.80 ಹಾಗೂ 81 ರಲ್ಲಿ ನನ್ನನ್ನು ಸೇರಿಸಿ ನನ್ನ ಉಳಿದ ತಮ್ಮಂದಿರಿಗೆ ಕೊಟ್ಟ ಜಾಗದಲ್ಲಿ ಅವರು ವಾಸ ಮಾಡುತ್ತಿದ್ದಾರೆಂದರೆ ಸರಿಯಲ್ಲ. ದಾವಾ ಸ್ವತ್ತಿನ ಐಟಂ ನಂ.8 ರಲ್ಲಿ ಖಾನೇಷುಮಾರಿ ನಂ.114 ರಲ್ಲಿ ನನ್ನ ತಾಯಿ ಹಾಗೂ ತಮ್ಮನಾದ ಜಾನ್ ಬಾಸ್ಕೋರವರು ಸ್ವಾಧೀನದಲ್ಲಿದ್ದಾರೆಂದರೆ ಸರಿ. ಈಗಾಗಲೇ ನಮ್ಮ ಕುಟುಂಬದಲ್ಲಿ ವಿಭಾಗವಾಗಿದ್ದು ನನಗೆ ಹಾಗೂ ನನ್ನ ತಮ್ಮಂದಿರು ಮತ್ತು ತಂಗಿಯಂದಿರು ಅವರ ಭಾಗದಲ್ಲಿ ಸ್ವಾಧೀನದಲ್ಲಿದ್ದರೂ ಸಹಿತ ನಾನು ಈಗ ಮತ್ತೆ ವಿಭಾಗ ಕೋರಿ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನ್ನ ತಂದೆಯವರ ಆಸ್ತಿಯಲ್ಲಿ ಭಾಗ ಕೇಳುತ್ತಿದ್ದೇನೆಂದು ನುಡಿಯುತ್ತಾರೆ.

**7.** ನನ್ನ ತಮ್ಮ ಆಲೇಕ್ಸಜಾಂಡರ್ ಹೆಲನ್ ಮೇರಿ ಇವರನ್ನು ಮದುವೆಯಾಗಿದ್ದು ಅವರಿಗೂ ಕುಟುಂಬವಿತ್ತು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಅಲೆಕ್ಸಜಾಂಡರ್ ಮತ್ತು ಹೆಲನ್ ಮೇರಿ ರವರಿಗೆ ಯೋಹನ್ ಎಂಬ ಗಂಡು ಮಗ ಇದ್ದಾನೆಂದರೆ ಸಾಕ್ಷಿಯು ನನ್ನ ತಮ್ಮ 15 ರಿಂದ 17 ವರ್ಷದ ಹಿಂದೆ ಎಲ್ಲೋ ಹೋಗಿರುತ್ತಾನೆ ಯಾರನ್ನು ಮದುವೆಯಾಗಿದ್ದಾರೆಂದು ನನಗೆ ಗೊತ್ತಿಲ್ಲ ಅವರಿಗೆ ಪಾಲು ಬೇಕಾದ್ದಲ್ಲಿ ಅವರು ಬಂದು ಹಾಜರಾದರೆ ಕೊಡಬಹುದು ಎಂದು ನುಡಿಯುತ್ತಾರೆ.

ಮರುವಿಚಾರಣೆಃ ಇರುವುದಿಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**